as such Bangalore Division will be supplied with vehicles on priority basis. Vehicle No. KA 01 F 5010 fixed for Kumta-Bangalore service which has performed high KMs will be replaced before end of March, 93

6. ಬೆಂಗಳೂರಿನ ನ್ಯಾಷನಲ್ ಕೊ-ಆಪರೇಟೀವ್ ಬ್ಯಾಂಕ್‌ನಲ್ಲಿ ಹುದ್ದೆಗಳನ್ನು ತುಂಬುವಾಗ ರೋಸ್ಟರ್ ಪಾಲನೆ ಮಾಡದಿರುವುದು.

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಒಂದು ಸಹಕಾರಿ ಬ್ಯಾಂಕ್ ಆಗಿದ್ದು, ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಅಡಿಯಲ್ಲಿ ಬರುತ್ತದೆ. ಈ ಬ್ಯಾಂಕ್‌ನಲ್ಲಿ ಒಟ್ಟು 121 ನೌಕರರು (ಅಧಿಕಾರಿಗಳನ್ನು ಸೇರಿಸಿ) ಇದ್ದು, ಇವರಲ್ಲಿ ಕೇವಲ ಎರಡು ನೌಕರರುಗಳು ಮಾತ್ರ ಪರಿಶಿಷ್ಟ ಜಾತಿ ವರ್ಗಗಳಿಗೆ ಸೇರಿದವರಾಗಿದ್ದಾರೆ. ಇಲ್ಲಿ ಅರ್ಜಿಗಳನ್ನು ಕರೆಯದೆ, ಎಲ್ಲಾ ಹುದ್ದೆಗಳನ್ನೂ ತುಂಬಿಕೊಳ್ಳಲಾಗಿದೆ. ಸರ್ಕಾರದಿಂದ ಧನಸಹಾಯ ಪಡೆಯುತ್ತಿಲ್ಲವೆಂಬ ಒಂದು ಕಾರಣಕ್ಕಾಗಿ ಈ ಬ್ಯಾಂಕಿನಲ್ಲಿ ರೋಸ್ಟರ್ ಪಾಲನೆ ಮಾಡುತ್ತಿಲ್ಲ. ಈ ರೀತಿ ರಾಜ್ಯದಲ್ಲಿರುವ ಸಹಕಾರಿ ಸಂಸ್ಥೆಗಳು ರೋಸ್ಟರ್ ಪದ್ಧತಿ ಪಾಲನೆ ಮಾಡದಿದ್ದರೆ, ಪರಿಶಿಷ್ಟ ಜಾತಿ-ವರ್ಗದವರಿಗೆ ಯಾವುದೇ ಹುದ್ದೆಗಳು ದೊರಕುವುದಿಲ್ಲ. ಆದ್ದರಿಂದ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಸರ್ಕಾರದ ರೋಸ್ಟರ್ ಪಾಲನೆಯನ್ನು ಮೇಲ್ಕಂಡ ಬ್ಯಾಂಕಿನಲ್ಲಿ ಮಾಡಲು ಸೂಚನೆ ನೀಡುವುದು ಅತಿ ಅಗತ್ಯ. ಈ ಬಗ್ಗೆ ಮಾನ್ಯ ಸಹಕಾರಿ ಸಚಿವರು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ (ಲಿ) ಬೆಂಗಳೂರು ಇದು 1975ರ ನಂತರ ನೊಂದಣಿ ಆಗಿರುತ್ತದೆ. ಈ ಬ್ಯಾಂಕು ಮಿಾಸಲಾತಿ ಪದ್ಧತಿಯನ್ನು ಅನುಸರಿಸಿರುವುದಿಲ್ಲ.

ಹಾಲಿಯಾಗಿ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ 121 ಸಿಬ್ಬಂದಿಗಳಲ್ಲಿ ಇಬ್ಬರು ನೌಕರರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ವಿವರಣೆಯು ಈ ಕೆಳಕಂಡಂತೆ ಇರುತ್ತದೆ :

ಕ್ರ. ಸಂ.	ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ	ಪರಿಶಿಷ್ಟ ಜಾತಿ : ಪಂಗಡ
1.	ಮುಖ್ಯ ಕಾರ್ಯನಿರ್ವಹಣಾಧಿಕಾರಿ	1	-
2.	ಮ್ಯಾನೇಜರ್	1	-
3.	ಸಹಾಯಕ ಮ್ಯಾನೋಜರ್	1	-
4.	ಲೆಕ್ಕಾಧಿಕಾರಿ	2	-
5.	ಸಹಾಯಕ ಲೆಕ್ಕಾಧಿಕಾರಿ	3	-
6.	ಹಿರಿಯ ಸಹಾಯಕರು	5	-
7.	ಕಿರಿಯ ಸಹಾಯಕರು	90	2
8.	ಅಟೆಂಡರ್:ವಾಚ್‌ಮನ್:ಡ್ರೈವರ್	18	-

ಧನ ಸಹಾಯ ಪಡೆಯದೇ ಇರುವ ಸಹಕಾರ ಸಂಘಗಳವರು ಸಹ ಮಾಸಲಾತಿ ಅನುಸರಿಸಲು ನಿರ್ದೇಶನ ನೀಡಬಹುದೇ ಎಂಬುದರ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ವಿತ್ತೀಯ ಕಾರ್ಯಕಲಾಪಗಳು

1993-94ನೇ ಸಾಲಿನ ಆಯವ್ಯಯದದ ಮೇಲೆ ಸಾಮಾನ್ಯ ಚರ್ಚೆ

† ಶ್ರೀ ಎಸ್. ಬಂಗಾರಪ್ಪ (ಸೊರಬ) : ಸನ್ಮಾನ್ಯ ಸಭಾಧ್ಯಕ್ಷರೆ, 1993-94ರ ಆಯವ್ಯಯ ಪತ್ರದ ಮೇಲೆ ನಡೆಯುತ್ತಿರುವ ಈ ಸಾಮಾನ್ಯ ಚರ್ಚೆಯಲ್ಲಿ ಭಾಗವಹಿಸತಕ್ಕಂತಹ ಸದವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಮೊಟ್ಟ ಮೊದಲನೆಯದಾಗಿ ತಮಗೆ ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ನಾನು ಕೆಲವು ಅಂಕಿಅಂಶಗಳನ್ನಿಟ್ಟು ರಾಜ್ಯದ ಆರ್ಥಿಕ ವಿಷಯಗಳ ಬಗ್ಗೆ ಮಾತನಾಡಬೇಕೆನ್ನುವ ಅಭಿಪ್ರಾಯದಿಂದ ಇಲ್ಲಿ ನಿಂತಿದ್ದೇನೆ. ಇದಕ್ಕೆ ಪೂರ್ವ ನಾನು ಒಂದು ಅಭಿಪ್ರಾಯವನ್ನು ಕೊಟ್ಟರೆ ಅದು ನಮ್ಮ ಚಿಂತನೆಗೆ, ನಮ್ಮಲ್ಲಿರುವ ಸಾಮಾಜಿಕ, ಆರ್ಥಿಕ ವ್ಯವಸ್ಥೆಗೆ ಅದು ಪೂರಕವಾಗಿ ನಿಲ್ಲಬಹುದೆಂದು ನನ್ನ ಭಾವನೆ. ನಮ್ಮ ಸಮಾಜ ಇವ್ಯಾವುದು ಎಂಬುದು. ನಮ್ಮ ಆರ್ಥಿಕ ಸಮಾಜ ಬೇಸಾಯಕ್ಕೆ ಸಂಬಂಧಿಸಿದ ಆರ್ಥಿಕ ವಿಷಯದ ಮೇಲೆ ನಿಂತಿರುವ ಸಮಾಜ, ಇದನ್ನು ಕರ್ನಾಟಕಕ್ಕೆ ಸೀಮಿತಗೊಳಿಸಿ ನಾನು ಹೇಳಿದರೂ ಕೂಡ ರಾಷ್ಟ್ರಕ್ಕೇ ಇದು ಅನ್ವಯವಾಗುವ ಮಾತು. ನಮ್ಮ ಕೃಷಿ ಆಧಾರಿತ ಚಿಂತನೆಯನ್ನು ಮೂಲಭೂತವಾಗಿಟ್ಟರೆ ನಮ್ಮಂಥ ದೇಶದಲ್ಲಿ ಬೇರೆ ಕೈಗಾರಿಕಾ ನೀತಿ ಇತ್ಯಾದಿ ನೀತಿಗಳನ್ನು ಅವಲೋಕನ ಮಾಡಲು ಇಲ್ಲಿ ಅನುಕೂಲವಾಗುತ್ತದೆ. ನಮ್ಮಂತಹ ದೇಶದಲ್ಲಿ ಕೃಷಿ ಆಧಾರಿತ ನೀತಿ ವಿಫುಲಗೊಂಡರೆ ಇನ್ನುಳಿದಿರುವ ನೀತಿ ಅದೆಂದಿಗೂ ಉದ್ಧಾರವಾಗಲು ಸಾಧ್ಯವೇ ಇಲ್ಲ. ಇದು ವಿಭಿನ್ನವಾಗಿದೆ. ಬಹಳ ಮುಂದುವರೆದ ಜಪಾನ್, ಅಮೆರಿಕಾ, ಇಂಗ್ಲೆಂಡ್ ದೇಶಗಳಿಗೆ ಹೋಲಿಸಿದರೆ, ನಮ್ಮಂಥಹ ದೇಶದಲ್ಲಿ ಮಳೆ ಬರಬೇಕು, ಡ್ಯಾಮ್‌ಗಳು ಕಟ್ಟಿದ್ದರೆ ಅವು ತುಂಬಬೇಕು ಅಥವಾ ನೀರಾವರಿಯಲ್ಲದ ಪ್ರದೇಶಗಳಲ್ಲಿ ನಾವು ಅರ್ಥವ್ಯವಸ್ಥೆಯನ್ನು ಕೃಷಿ ಮುಖಾಂತರ ಕಾಣುತ್ತೇವೆ. ಇಲ್ಲಿ ನಾವು ಬಿದ್ದು ಹೋಗಿಬಿಟ್ಟರೆ ಅಂದರೆ ಮಳೆ ಬಾರದೇ ಇದ್ದರೆ ನಾವು ಕಟ್ಟಿರುವ ಅಣೆಕಟ್ಟುಗಳು ಪ್ರಯೋಜನಕ್ಕೆ ಬರಲು ಸಾಧ್ಯವೇ ಇಲ್ಲ.

ಉದಾಹರಣೆಗೆ ಅಮೆರಿಕವನ್ನು ತೆಗೆದುಕೊಳ್ಳೋಣ. ಮತ್ತೊಂದು ರಾಷ್ಟ್ರವನ್ನು ತೆಗೆದುಕೊಂಡು ಆ ರೀತಿ ಇರತಕ್ಕಂಥಹ ಆರ್ಥಿಕ ಸಮಾಜವನ್ನು ವಿಚಾರ ಮಾಡೋಣ. ಒಂದು ವೇಳೆ ಮಳೆ ಬಾರದೆ ಅಲ್ಲಿ ಡ್ಯಾಮ್‌ಗಳು ತುಂಬದೇ ಕೃಷಿ ಆರ್ಥಿಕ ಶಕ್ತಿ ಕುಸಿದು ಬಿದ್ದುಹೋಗುತ್ತಿದೆ ಎಂದು ಇಟ್ಟುಕೊಳ್ಳೋಣ. ಆಗ ಆ ರಾಷ್ಟ್ರದವರು ಕೈಗಾರಿಕಾ ಆರ್ಥಿಕ ನೀತಿ ಏನಿದೆ ಸ್ವತಃ ಅದರ ಮೇಲೆಯೇ ನಿಲ್ಲಬಲ್ಲರು. ಆ ಶಕ್ತಿಯನ್ನು ಅವರು ಪರ್ಯಾಯವಾಗಿ ಸ್ಪಷ್ಟವಾಗಿ ಇಟ್ಟುಕೊಂಡಿದ್ದಾರ. ಆದರೆ ನಮ್ಮಂತಹ ದೇಶದಲ್ಲಿ ಹಾಗಿಲ್ಲ. ಕೃಷಿ ಆಧಾರಿತ ಆರ್ಥಿಕ ನೀತಿಗೆ ಸಂಬಂಧಪಟ್ಟಿರತಕ್ಕಂಥ ಕೈಗಾರಿಕಾ ನೀತಿ ನಮ್ಮಂತಹ ರಾಷ್ಟ್ರದಲ್ಲಿ ಉಳಿದುಕೊಂಡಿದೆ. ಕೃಷಿ ನೀತಿ ಹೋಗಿಬಿಟ್ಟರೆ ಆರ್ಥಿಕ ಶಕ್ತಿ ಕುಸಿದುಬಿದ್ದು ಹೋಗಿಬಿಟ್ಟರೆ, ಕೈಗಾರಿಕಾ ಆರ್ಥಿಕ ಶಕ್ತಿಯೂ ಕೂಡ ಅದು ಎಷ್ಟೇ ಬೆಳವಣಿಗೆಯಾಗಿದ್ದರೂ ಅದು ನಿಲ್ಲುವುದಕ್ಕೆ ನಮ್ಮಂತಹ ರಾಷ್ಟ್ರದಲ್ಲಿ ಸಾಧ್ಯವೇ ಇಲ್ಲ. ಜೊತೆಗೆ ಶೇಕಡ 80, 90 ರಷ್ಟು ಕೃಷಿ ಪ್ರದೇಶ ಜನಸಂಖ್ಯೆ ಅದರ ಮೇಲೆ ಅವಲಂಬನೆಯನ್ನು